ಸಾಕ್ಷಿಯನ್ನು ದಿ: 07.11.2024 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿ.ಡಬ್ಲ್ಯೂ-1

**ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿಗಳ ಪರ ವಕೀಲರಿಂದ:-**

1. ನಾನು ನನ್ನ ತಂದೆ ಹೆಸರನ್ನು ನನ್ನ ವಾದ ಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ದಾವಾ ಸ್ವತ್ತಿನ ಸಂಖ್ಯೆ ಗೊತ್ತಿಲ್ಲ. ದಾವಾ ಸ್ವತ್ತಿನ ಚೆಕ್ಕುಬಂದಿ ಪೂರ್ವಕ್ಕೆಃ ಬೋರೇಗೌಡನ ಮನೆ, ಪಶ್ಚಿಮಕ್ಕೆಃ ಮೊಳ್ಳೇಗೌಡನ ಮನೆ, ಉತ್ತರಕ್ಕೆಃ ರಸ್ತೆ, ದಕ್ಷಿಣಕ್ಕೆಃ ಕಿವುಡೇಗೌಡನ ನಿಂಗಣ್ಣನ ಮನೆ. ದಾವಾ ಸ್ವತ್ತಿನಲ್ಲಿ ಎಷ್ಟು ವಿಸ್ತೀರ್ಣದಲ್ಲಿ ಮನೆ ಕಟ್ಟಿರುತ್ತೇನೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ಹಿಂದಕ್ಕೆ ಜಾಗ ಉಳಿಸಿಕೊಂಡು ಮನೆ ಕಟ್ಟಿರುತ್ತೇನೆ. ದಾವಾ ಆಸ್ತಿ ಮನೆ ಕಟ್ಟುವುದಕ್ಕಿಂತ ಪೂರ್ವದಲ್ಲಿ ನನ್ನ ತಂದೆ ಹೆಸರಿಗೆ ಇತ್ತು. ದಾವಾ ಸ್ವತ್ತನ್ನು ನನ್ನ ತಂದೆ ಖರೀದಿ ಮಾಡಿದ್ದರು. ನನ್ನ ತಂದೆ ಪೂ-ಪಃ 29 ಅಡಿ, ಉ-ದಃ 93 ಅಡಿ ಖರೀದಿ ಮಾಡಿದ್ದರು. ದಾವಾ ಸ್ವತ್ತಿನ ದಕ್ಷಿಣಕ್ಕೆ ಪ್ರತಿವಾದಿಯರ ಮನೆ ಬರುತ್ತದೆ. ಪ್ರತಿವಾದಿಯರ ಮನೆಯ ಪೂರ್ವ ದಿಕ್ಕಿಗೆ ಅವರ ಖಾಲಿ ನಿವೇಶನ ಇದೆ ಎಂದರೆ ಸರಿ. ನ್ಯಾಯಾಲಯದ ನಿಯೋಗಿಯನ್ನು ನೇಮಕ ಮಾಡಿ ನನ್ನ ಮತ್ತು ಪ್ರತಿವಾದಿಯ ಆಸ್ತಿ ವಿವರಣೆ ಪಡೆಯಲು ತಕರಾರಿಲ್ಲ ಎಂದರೆ ಸರಿ. ಪ್ರತಿವಾದಿ ಆಸ್ತಿ ಇ-ಸ್ವತ್ತು ಮಾಡಿಸಿರುತ್ತಾರೆಂದರೆ ಸರಿ. ಇ-ಸ್ವತ್ತು ಮಾಡಿಸುವ ಸಮಯದಲ್ಲಿ ಗ್ರಾಮ ಪಂಚಾಯಿತಿಯವರು ಸ್ಥಳ ತನಿಖೆ ಮಾಡುತ್ತಾರೆಂದರೆ ಸರಿ. ಪ್ರತಿವಾದಿ ಇ-ಸ್ವತ್ತು ಮಾಡಿಸಿಕೊಂಡ ಬಗ್ಗೆ ಎರಡು ವರ್ಷಗಳ ಹಿಂದೆ ಗೊತ್ತಾಗಿರುತ್ತದೆ. ಪ್ರತಿವಾದಿಯ ಇ-ಸ್ವತ್ತನ್ನು ನಾನು ಪ್ರಶ್ನೆ ಮಾಡಿಲ್ಲ. ನಮ್ಮ ವಾಸದ ಮನೆಗೆ ಹೊಂದಿಕೊಂಡಂತೆ ನಮಗೆ ಸೇರಿದ ಯಾವುದೇ ಖಾಲಿ ನಿವೇಶನ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂದಪಟ್ಟಂತೆ ವಿಸ್ತೀರ್ಣ ತೋರಿಸುವ ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸರಿ. ನಿಪಿ.2 ರಲ್ಲಿ ವಿಸ್ತೀರ್ಣ ಮತ್ತು ಚೆಕ್ಕುಬಂದಿ ನಮೂದಿರುವುದಿಲ್ಲ ಎಂದರೆ ಸರಿ. ನಾನು ಪಂಚಾಯಿತಿಯವರ ಜೊತೆ ಸೇರಿಕೊಂಡು ಸುಳ್ಳು ದಾಖಲಾತಿಯನ್ನು ಸೃಷ್ಟಿ ಮಾಡಿರುತ್ತೇನೆಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ನನಗೆ ಯಾವುದೇ ಹಕ್ಕು, ಅಧಿಕಾರ ಮತ್ತು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಕ್ರಯಕ್ಕೆ ಪಡೆದ ಕ್ರಯಪತ್ರ ಹಾಜರು ಪಡಿಸಿರುತ್ತೇನೆ. ದಾವಾ ಆಸ್ತಿಯ ಚೆಕ್ಕುಬಂದಿ ಮತ್ತು ನಿಪಿ.1 ರ ಚೆಕ್ಕುಬಂದಿಗೆ ತಾಳೆ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಆಸ್ತಿ ಲಪಟಾಯಿಸಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪ್ರತಿವಾದಿಯ ಖಾಲಿ ನಿವೇಶನ ಸೇರಿಸಿಕೊಂಡು ಸುಳ್ಳು ಚೆಕ್ಕುಬಂದಿ ನಮೂದು ಮಾಡಿ ದಾವೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ